**ಸಾಕ್ಷಿಯನ್ನು ದಿನಾಂಕಃ 06.02.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಬಿ.ಎಲ್.ಟಿ. ವಕೀಲರಿಂದಃ**

ನಿ.ಡಿ.–1– ಕ್ರಯ ಪತ್ರದಲ್ಲಿ ಸದರಿ ಆಸ್ತಿಯ ಷೆಡ್ಯೂಲ್ ನಲ್ಲ ದಕ್ಷಿಣದ ಚೆಕ್ಕುಬಂದಿ ತಪ್ಪಾಗಿದ್ದರಿಂದ ಅದನ್ನು ಸರಿಪಡಿಸಿ ದಿನಾಂಕಃ 22.05.2025 ರಂದು ನೋಂದಾಯಿತ ತಿದ್ದುಪಡಿ ಕ್ರಯ ಪತ್ರ ಮಾಡಿರುತ್ತೇವೆ. ನಿ.ಡಿ.–1 ರಲ್ಲಿ ದಕ್ಷಿಣಕ್ಕೆ ಮಲ್ಲಣ್ಣರವರ ಜಮೀನು ಎಂಬುದಾಗಿ ತಪ್ಪಾಗಿ ನಮೂದಾಗಿದ್ದು ಅದನ್ನು ಕಾಳನಿಂಗಮ್ಮ ಮಹದೇವುರವರ ಜಮೀನು ಎಂಬುದಾಗಿ ತಿದ್ದುಪಡಿ ಮಾಡಿರುತ್ತೇವೆ. ನಿ.ಡಿ.–17 ರಲ್ಲಿ ಆಸ್ತಿಯ ದಕ್ಷಿಣಕ್ಕೆ ಸ.ನಂ. 81 ಎಂದು ಸೇರಿಸಿದ್ದೇವೆಂದರೆ ಸರಿ. ಸದರಿ ಸ.ನಂ. 81ರ ಜಮೀನು ಕಾಳಿಂಗಮ್ಮರವರಿಗೆ ಸೇರಿತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ನಿ.ಡಿ.–1 ರಡಿಯಲ್ಲಿ ಆಸ್ತಿಯನ್ನು ಖರೀದಿ ಮಾಡುವಾಗ ಅಳತೆ ಮಾಡಿಸಿದ್ದು ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿ.ಡಿ.–17 ರಂತೆ ತಿದ್ದುಪಡಿ ಕ್ರಯ ಪತ್ರ ಮಾಡಿಸುವಾಗ ಸರ್ವೆ ಇಲಾಖೆಯಿಂದ ಯಾವುದೇ 11E ಸ್ಕೆಚ್ ಮಾಡಿಸಿರುವುದಿಲ್ಲ. ನಾನು ಹಾಜರುಪಡಿಸಿದ ಕ್ರಯ ಪತ್ರಕ್ಕೂ ಹಾಗು ನಿ.ಡಿ.–9 ಟಿಪ್ಪಣಿ ಸ್ಕೆಚ್ ಗು ತಾಳೆ ಹೊಂದುವುದಿಲ್ಲವೆಂದರೆ ಸರಿಯಲ್ಲ. ಸದರಿ ನಿ.ಡಿ.–9 ದಾಖಲೆ ಪೂರ್ತಿ 2,622 ಎಕರೆ ಜಮೀನಿಗೆ ಸಂಬಂಧಿಸಿದ ಟಿಪ್ಪಣಿ ಎಂದರೆ ಸರಿಯಲ್ಲ. ನಿ.ಡಿ.–9 ರ ಟಿಪ್ಪಣಿಯಲ್ಲಿ ಪೂರ್ವಕ್ಕೆ ಕೇತಳ್ಳಿ ಗಡಿ ಎಂದು ನಮೂದಾಗಿರುತ್ತದೆಂದರೆ ಸರಿ. ಸದರಿ ಟಿಪ್ಪಣಿಯಲ್ಲಿ ಉತ್ತರಕ್ಕೆ – 1,600 ಚಿಲ್ಲರೆ ಎಕರೆ ವಿಸ್ತೀರ್ಣದ ಜಮೀನು ಎಂದು ತೋರಿಸಲಾಗಿದೆ ಎಂದರೆ ಸರಿಯಲ್ಲ. ಅದೇ ರೀತಿ ದಕ್ಷಿಣಕ್ಕೆ – 1,963 ಎಕರೆ ವಿಸ್ತೀರ್ಣದ ಜಮೀನು ಎಂದು ತೋರಿಸಲಾಗಿದೆ

ಎಂದರೆ ಸರಿಯಲ್ಲ. ಅದೇ ರೀತಿ ಪಶ್ಚಿಮಕ್ಕೆ – 3 ಎಕರೆ ವಿಸ್ತೀರ್ಣದ ಜಮೀನು ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ನಾನು ವಾದಿಗೆ ಸೇರಿದ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಿ.ಡಿ.–1 ಹಾಗು ನಿ.ಡಿ.–17 ರಂತೆ ಕ್ರಯ ಪತ್ರ ಹಾಗು ತಿದ್ದುಪಡಿ ಕ್ರಯ ಪತ್ರಗಳನ್ನು ಸೃಷ್ಟಿಸಿಕೊಂಡಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**